ಪ್ರಮಾಣ ವಚನ ಬೋಧಿಸಿದ ದಿನಾಂಕಃ 12.08.2025.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಸಾಕ್ಷಿಗೆ ಕನ್ನಡ ಮಾತನಾಡಲು ಬಾರದೇ ಇದ್ದ ಕಾರಣ ಶ್ರೀ ಅರುಣ್ ಕುಮಾರ್. ಕೆ . ವಕೀಲರನ್ನು ಅನುವಾದಕಾರ ವಕೀಲರಾಗಿ ನೇಮಿಸಲಾಯಿತು.**

**ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ ಕೆ.ಎಂ. ವಕೀಲರಿಂದ**

ನಮ್ಮ ಊರು ಗುಡಿಬಂಡೆಯ ಹತ್ತಿರ ಗಡಚಾರಲಹಳ್ಳಿ. ನಾನು ಅದೇ ಊರಿನಲ್ಲಿ ಹುಟ್ಟಿದ್ದೇನೆ. ನನ್ನ ತಂದೆಗೆ ಮೂರು ಜನ ಗಂಡು ಮಕ್ಕಳು ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆ. ಸದರಿಯವರಿಗೆಲ್ಲಾ ಮದುವೆಯಾಗಿದೆ. ನಾನು ಕೊನೆಯ ಮಗಳು. ನನ್ನ ಸಹೋದರರೆಲ್ಲಾ ಅದೇ ಊರಿನಲ್ಲಿ ಇದ್ದಾರೆ. ನನ್ನ ಅಕ್ಕ ಲಕ್ಷ್ಮಿದೇವಮ್ಮನವರನ್ನು ಚಿಕ್ಕಬಳ್ಳಾಪುರ ತಾಲ್ಲೂಕಿನ ಕಾಕಲಚಿಂತ ಊರಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. ನನ್ನ ಇನ್ನೊಬ್ಬ ಅಕ್ಕ ರಾಮಲಕ್ಷ್ಮೀ ರವರನ್ನು ಬಾಗೇಪಲ್ಲಿ ಊರಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. ನಾನು ಒಬ್ಬಳೇ ವಾಸ ಮಾಡುತ್ತಿದ್ದೇನೆ. ನಾನು ಈಗ ಕಮ್ಮಗಾನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ನನಗೆ ಈಗ 60 ವರ್ಷ. ನನಗೆ 16 ವರ್ಷಕ್ಕೆ ಮದುವೆ ಮಾಡಿದ್ದರು. ನನ್ನ ಮದುವೆಯಾಗುವ ಕಾಲಕ್ಕೆ ನನ್ನ ಅಕ್ಕನವರಿಗೆ ಮದುವೆಯಾಗಿ ಮಕ್ಕಳು ಮತ್ತು ಮೊಮ್ಮಕ್ಕಳಿದ್ದರು. ನಾನು ಈಗ 10 ವರ್ಷದಿಂದ ಕಮ್ಮಗಾನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ಅದಕ್ಕೂ ಮೊದಲು ನನ್ನ ತಾಯಿ ಊರಾದ ಗಡಚಾರಲಹಳ್ಳಿಯ ನನ್ನ ತವರು ಮನೆಯಲ್ಲಿ ವಾಸ ಮಾಡುತ್ತಿದ್ದೆನು. 10 ವರ್ಷದ ಹಿಂದೆ ನೀವು ನಿಮ್ಮ ತವರು ಮನೆಯಲ್ಲಿ ಇದ್ದಾಗ ನಿಮ್ಮ ತಂದೆ–ತಾಯಿಯ ರೇಷನ್ ಕಾರ್ಡ್ ಇತ್ತಾ ಎಂದರೆ ಇತ್ತು. ಸದರಿ ರೇಷನ್ ಕಾರ್ಡ್ ನಲ್ಲಿ ನಿಮ್ಮ ಮತ್ತು ನಿಮ್ಮ ಸಹೋದರರ ಹೆಸರು ಇತ್ತಾ ಎಂದರೆ ಸಾಕ್ಷಿಯು ನನ್ನ ಹೆಸರು ಇರಲಿಲ್ಲ, ನನ್ನ ಅಣ್ಣಂದಿರ ಹೆಸರು ಇತ್ತು ಎಂದು ಹೇಳುತ್ತಾರೆ. ಯಾವ ಕಾರಣಕ್ಕಾಗಿ ನಿಮ್ಮ ಹೆಸರನ್ನು ಸೇರಿಸಲಿಲ್ಲ ಎಂದರೆ ನಾನು ಹೆಣ್ಣು

ಮಗಳಾಗಿದ್ದ ಕಾರಣ ಮದುವೆಗೂ ಮುಂಚೆ ನಮ್ಮ ಹೆಸರನ್ನು ಸೇರಿಸಿಕೊಳ್ಳುತ್ತಿರಲಿಲ್ಲ, ಮದುವೆಯಾದ ನಂತರ ಗಂಡನ ಮನೆಯ ರೇಷನ್ ಕಾರ್ಡ್‌ನಲ್ಲಿ ಸೇರಿಸಿಕೊಳ್ಳುತ್ತಾರೆಂದು ನಮ್ಮ ಹೆಸರನ್ನು ಸೇರಿಸಿಲ್ಲ ಎಂದು ಹೇಳುತ್ತಾರೆ. ಹತ್ತು ವರ್ಷದ ಹಿಂದೆ ನಾನು ನನ್ನ ತವರು ಮನೆಗೆ ಹೋಗಿದ್ದೇನೆ ಎಂದು ಹೇಳಿದ್ದು, ಆ ಸಮಯದಲ್ಲಿ ನನ್ನ ಹೆಸರನ್ನು ತವರು ಮನೆಯ ರೇಷನ್ ಕಾರ್ಡ್‌ನಲ್ಲಿ ಸೇರಿಸಿರುವುದಿಲ್ಲ. ಗಂಡನ ಮನೆಯ ರೇಷನ್ ಕಾರ್ಡ್‌ನಲ್ಲಿ ನಿಮ್ಮ ಹೆಸರನ್ನು ಸೇರಿಸಿದ್ದಾರಾ ಎಂದರೆ ಸಾಕ್ಷಿಯು ಅವರು ಹೆಂಡತಿ ಬೇಡ ಎಂದು ನನ್ನನ್ನು ವಾಪಸ್ಸು ಕಳುವುಸಿದ್ದರಿಂದ ನನ್ನ ಹೆಸರನ್ನು ರೇಷನ್ ಕಾರ್ಡ್‌ನಲ್ಲಿ ಸೇರಿಸಿಲ್ಲ ಎಂದು ಹೇಳುತ್ತಾರೆ.

ನಾನು ಇದುವರೆಗೂ ಮತಚಲಾಯಿಸಿದ್ದೇನೆ. ಸುಮಾರು **10–12** ವರ್ಷಗಳಿಂದ ಕಮ್ಮಗಾನಹಳ್ಳಿಯ ಮತದಾರರ ಪಟ್ಟಿಯಲ್ಲಿ ಸೇರಿಸಿದ್ದು, ಅಲ್ಲಿಯೇ ನಾನು ಮತಚಲಾಯಿಸುತ್ತಿದ್ದೇನೆ. ಹತ್ತು ವರ್ಷದ ಪೂರ್ವದಲ್ಲಿ ನಿಮ್ಮ ತವರು ಮನೆಯಲ್ಲಿ ಮತ ಚಲಾಯಿಸುತ್ತಿರಲಿಲ್ಲವಾ ಎಂದರೆ ಇಲ್ಲ. ಯಾವ ಕಾರಣಕ್ಕಾಗಿ ನಿಮ್ಮ ತವರು ಮನೆಯ ವಿಳಾಸದಲ್ಲಿ ಚುನಾವಣಾ ಗುರುತಿನ ಚೀಟಿ ಮಾಡಿಸಿಕೊಳ್ಳಲಿಲ್ಲ ಹಾಗೂ ಆ ಊರಿನಲ್ಲಿ ಯಾಕೆ ಮತಚಲಾಯಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ–ತಾಯಿ ಮೃತಪಟ್ಟ ನಂತರ ನನ್ನ ಅಣ್ಣಂದಿರು ಮತ್ತು ಅತ್ತಿಗೆಯಂದಿರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಹಾಗಾಗಿ ನಾನು ಪಕ್ಕದ ಊರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಪಕ್ಕದ ಊರು ಯಾವುದು ಎಂದರೆ ಕಮ್ಮನಗಾನಹಳ್ಳಿ. ಹತ್ತು ವರ್ಷದ ಮೊದಲು ಎಲ್ಲಿ ವಾಸ ಮಾಡಿರುತ್ತೀರಿ ಎಂದರೆ ಸ್ವಲ್ಪ ಸ್ವಲ್ಪ ದಿನ ನನ್ನ ಅಕ್ಕಂದಿರ ಮನೆಯಲ್ಲಿ ವಾಸ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಬಾಗೇಪಲ್ಲಿಯಲ್ಲಿರುವ ರಾಮಲಕ್ಷ್ಮೀರವರ ಮನೆಯಲ್ಲಿ ವಾಸವಿದ್ದೆನು. ಇನ್ನು ಸ್ವಲ್ಪ ದಿನ ನನ್ನ ಚಿಕ್ಕ ಅಕ್ಕನವರಾದ ಲಕ್ಷ್ಮೀದೇವಮ್ಮ ನವರ ಮನೆಯಲ್ಲಿ ವಾಸ ಮಾಡಿರುತ್ತೇನೆ. ರಾಮಲಕ್ಷ್ಮಮ್ಮನ ಗಂಡನ ಹೆಸರು ವೆಂಕಟರಮಣಪ್ಪ. ಲಕ್ಷ್ಮೀದೇವಮ್ಮನವರ ಗಂಡನ ಹೆಸರು ಆವಲಪ್ಪ. ಸಾಕ್ಷಿಗೆ ಅದೇಗಾರಹಳ್ಳಿಯ ಮತದಾರರ ಪಟ್ಟಿಯನ್ನು ತೋರಿಸಿದಾಗ ಅದರಲ್ಲಿರುವ ತಮ್ಮ ಫೋಟೋವನ್ನು

ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.1 ಎಂದು, ಕ್ರಮ ಸಂಖ್ಯೆ:103 ರಲ್ಲಿ ಸಾಕ್ಷಿಯ ಪೋಟೋ ಮತ್ತು ವಿವರಣೆಯನ್ನು ನಿ.ಡಿ.1 (ಎ) ಎಂದು ಗುರುತಿಸಲಾಯಿತು. ನಾನು ನನ್ನ ಅಕ್ಕನ ಗಂಡನಾದ ಆವಲಪ್ಪನವರನ್ನು ಮದುವೆಯಾಗಿ ಅವರ ಮನೆಯಲ್ಲೇ ಇದ್ದೆನು ಎಂದರೆ ಸರಿಯಲ್ಲ. ಆವಲಪ್ಪನವರು ನನ್ನನ್ನು ಮತ್ತು ನನ್ನ ಅಕ್ಕನನ್ನು ಇಬ್ಬರನ್ನು ಕೂಡ ಮದುವೆಯಾಗಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾನು ಅಕ್ಕನ ಮನೆಯಲ್ಲೇ ಇದ್ದೆನು ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ಅಕ್ಕ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಕ್ಕ ಕಾಕಲಚಿಂತ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದಾರೆ ಆದರೆ ನಾನು ಕಮ್ಮಗಾನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ಆವಲಪ್ಪನವರು ನನ್ನ ಜೊತೆಯಲ್ಲಿಯೂ ಇರುತ್ತಾರೆ ಹಾಗೂ ಅಕ್ಕನ ಮನೆಯಲ್ಲೂ ಕೂಡ ಇರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮದುವೆಯು ಹಿರಿಯರು ನಿಶ್ಚಯಿಸಿ ಮಾಡಿರುವ ಮದುವೆ. ಪಾಪಣ್ಣನವರು ನಿಮ್ಮ ಹತ್ತಿರದ ಸಂಬಂಧಿಕರಾ ಎಂದರೆ ಇಲ್ಲ. ಪಾಪಣ್ಣನವರೇ ನಮ್ಮ ಸಂಬಂಧವನ್ನು ಹುಡುಕಿಕೊಂಡು ಬಂದು ಮದುವೆ ಮಾಡಿಕೊಂಡಿದ್ದಾರೆ. ಪಾಪಣ್ಣನವರ ತಂದೆಯ ಹೆಸರು ಕೋಟಪ್ಪ. ಕೋಟಪ್ಪನವರಿಗೆ ಇಬ್ಬರು ಅಣ್ಣ–ತಮ್ಮಂದಿರಿದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ಮದುವೆಯ ಪೂರ್ವದಲ್ಲಿ ಹೆಣ್ಣು ನೋಡಲು ಗಂಡಿನ ಮನೆಯವರು ಯಾರು ಯಾರು ಬಂದಿದ್ದರು ಎಂದರೆ ಸುಮಾರು 10 ಜನ ಬಂದಿದ್ದರು. ಅವರುಗಳೆಂದರೆ ಪಾಪಣ್ಣ, ಅವರ ಇಬ್ಬರು ಅಕ್ಕಂದಿರು, ಅವರ ತಂದೆ –ತಾಯಿ ಮತ್ತು 4–5 ಜನ ಗ್ರಾಮಸ್ಥರು ಬಂದಿದ್ದರು. ಪಾಪಣ್ಣನವರ ಅಕ್ಕಂದಿರ ಹೆಸರು ಮುನಿಜಯಮ್ಮ ಮತ್ತು ಹನುಮಕ್ಕ. ನಿಮ್ಮ ಮದುವೆಯ ಫೋಟೋ ಅಥವಾ ಲಗ್ನಪತ್ರಿಕೆ ಇದೆಯಾ ಎಂದರೆ ಸಾಕ್ಷಿಯು ಫೋಟೋ ಇಲ್ಲ ಆದರೆ ಲಗ್ನಪತ್ರಿಕೆ ಇದೆ ಎಂದು ಹೇಳುತ್ತಾರೆ. ನಮ್ಮ ಮದುವೆಯು ಗಡಚಾರಲಹಳ್ಳಿಯ ನಮ್ಮ ಮನೆಯ ಮುಂದೆ ಆಗಿರುತ್ತದೆ. ಮದುವೆಯ ದಿನಾಂಕ ಗೊತ್ತಿಲ್ಲ ಆದರೆ ಮಂಗಳವಾರ, ಬುಧವಾರ ಆಗಿರುತ್ತದೆ. ನಾನು ಪಾಪಣ್ಣನವರನ್ನು ಮದುವೆಯಾಗದೇ ಇರುವ ಕಾರಣ ನನಗೆ ಮದುವೆಯ ದಿನಾಂಕ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ನಂತರ ಎರಡು

ವರ್ಷ ನಾವು ಜೊತೆಯಲ್ಲಿ ಇದ್ದೆವು. ಆ ಸಮಯದಲ್ಲಿ ಇಬ್ಬರು ಅನ್ಯೋನ್ಯವಾಗಿ ಇದ್ದೀರಾ ಎಂದರೆ ಹೌದು. ಆ ಸಮಯದಲ್ಲಿ ಚುನಾವಣಾ ಗುರುತಿನ ಚೀಟಿ ಅಥವಾ ರೇಷನ್ ಕಾರ್ಡ್‌ನ್ನು ಮಾಡಿಸಿಕೊಂಡಿದ್ದೀರಾ ಎಂದರೆ ಇಲ್ಲ. ಪಾಪಣ್ಣನವರೇ ನನ್ನ ಗಂಡ ಎಂದು ತೋರಿಸಲು ಲಗ್ನಪತ್ರಿಕೆ ಇದೆ. ಸುಮಾರು **40** ವರ್ಷದಿಂದ ಗಂಡ ಬೇಕು ಎಂದು ಗಂಡನ ಮನೆಗೆ ಏನಾದರೂ ಹೋಗಿದ್ದೀರಾ ಎಂದರೆ ಹೌದು. ಸುಮಾರು **10** ಬಾರಿ ಗ್ರಾಮಸ್ಥರನ್ನು ಕರೆದುಕೊಂಡು ಹೋಗಿದ್ದೆನು, ಆದರೆ ಅವರು ನನ್ನನ್ನು ಮನೆಯಿಂದ ಹೊರ ಹಾಕಿದ್ದಾರೆ. ಯಾವ ಯಾವ ದಿನಾಂಕದಂದು ಹಾಗೂ ಯಾರು ಯಾರನ್ನು ಕರೆದುಕೊಂಡು ಪಂಚಾಯತಿಗೆ ಹೋಗಿದ್ದೀರಾ ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.